but what about other P.W.D. roads passing through the villages ?

Sri H. M. CHANNABASAPPA.—The circular refers to all roads maintained by the P.W.D. irrespective of whether they are highways or State roads, ODR or MDR standards. If the roads happen to pass through villages and towns, that portion within the village or town shall be, on a planned programme, tarred within a prescribed time. We have not prescribed any time-limit so far, but I have instructed that they should be given top priority.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಎನ್. ಇ. ಎಸ್. ಅಲ್ಲದ ರಸ್ತೆಗಳಲ್ಲಿ ಜಾಸ್ತಿ ಮೈಲಿಗಳ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಸರಕಾರ ಆಲೋಚಿಸಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೆಲ್ಲಾ ಡೀಟೇಲ್ಸ್‌ಗಳು. ಒಂದು ವೇಳೆ ನೂರು ಮೈಲಿ ರಸ್ತೆಗಳನ್ನು ತಗೆದುಕೊಳ್ಳುವ ಕಡೆ 110 ಮೈಲಿಗಳನ್ನು ಮಾಡಿದರೆ ಅದನ್ನು ಬೇಡ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನ್-ಎನ್. ಇ. ಎಸ್. ಏರಿಯಾದಲ್ಲಿ ಮಾಡಲು ಬೇರೆ ನಿಯಮಗಳಿವೆ. ಅದರಂತೆ ಒಂದು ಮೈಲಿ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚುಕಡಮೆ ಗ್ರಾಮಗಳಲ್ಲಿ ಆಗತಕ್ಕದ್ದು ತಾಲ್ಲೂಕು ಬೋರ್ಡ್‌ಗಳಿಂದ ಆಗತಕ್ಕದ್ದು. ಅದರಂತೆ ಮಾಡಲಾಗುತ್ತಿದೆ.

ಶ್ರೀ ಕೆ. ಎ. ಪಾಟೀಲ್.—ಬಿಜಾಪುರ ಡಿಸ್ಟ್ರಿಕ್ಟಿಗೆ ಮೊದಲನೆಯ ಪ್ರಯಾರಿಟಿ, ತುಮಕೂರು ಡಿಸ್ಟ್ರಿಕ್ಟಿಗೆ ಎರಡನೆಯ ಪ್ರಯಾರಿಟಿ ಕೊಡಬೇಕೆಂದು ಯೋಚಿಸಲಾಗಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫಸ್ಟ್ ಪ್ರಯಾರಿಟಿ, ಸೆಕೆಂಡ್ ಪ್ರಯಾರಿಟಿ ಎನ್ನುವ ಪ್ರಶ್ನೆ ಇಲ್ಲಿಲ್ಲ. ಎಲ್ಲೆಲ್ಲಿ ಹಿಂದುಳಿದಿದೆಯೋ ಅಲ್ಲಗೆ ಹೆಚ್ಚು ಗಮನವನ್ನು ಸರಕಾರ ಕೊಡಬೇಕೆಂದಿದೆ.

Midwives and Nurses in the Civil Hospital, Belgaum.

*Q.—221. Sri S. P. TALWALKAR (Raibag).—

Will the Government be pleased to state :—

(*a*) the total number of midwives and nurses working in the Civil Hospital, Belgaum ;

(*b*) of them, the number of Brahmins, Christians and the Scheduled Castes ;

(*c*) the total number of midwives and nurses who do not belong to Belgaum and the facilities provided for them ?

A.—Sri K. K. HEGDE (Minister for Health).—

(*a*) Midwives	...	...	18
Nurses	...	...	35

.....	Brahmins	Christians	Scheduled Castes
(*b*) Midwives	7	2	2
Nurses	13	12	...
(*c*) Midwives	...	...	12
Nurses	...	...	20

All the facilities that are admissible to this Class of Government Servants are given.

ಶ್ರೀ ಎಸ್. ಪಿ. ತಲವಾಲ್‌ಕರ್.—ಇಲ್ಲಿ ಕೊಟ್ಟಿರುವ ಉತ್ತರದಲ್ಲಿ ಷೆಡ್ಯೂಲ್ಡ್ ಪಂಗಡಕ್ಕೆ ಸೇರಿದವರು ಒಬ್ಬರೂ ಇಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ಷೆಡ್ಯೂಲ್ಡ್ ಕ್ಯಾಸ್ಟಿಗೆ ಸೇರಿದವರು ಯಾರು ಬರಲಿಲ್ಲ, ಅದರಿಂದ ಯಾರನ್ನೂ ತೆಗೆದುಕೊಂಡಿಲ್ಲ.

ಶ್ರೀ ಎಸ್. ಪಿ. ತಲವಾಲ್‌ಕರ್.—ಅಪ್ಲಿಕೇಷನ್ನುಗಳು ಬಂದ ಮೇಲೆ ಅವಕ್ಕೆ ಕಾರಣವನ್ನು ಕೊಡದೆ ರಿಜೆಕ್ಟ್ ಮಾಡುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ಬಂದಿಲ್ಲ.

(ಅನಂತರ, ಶ್ರೀ ಎಸ್.ಪಿ.ತಲವಾಲ್‌ಕರ್ ಅವರು ಮರಾಠಿ ಭಾಷೆಯಲ್ಲಿ ಉಪ ಪ್ರಶ್ನೆಗಳನ್ನು ಕೇಳಿದರು. ಅಧ್ಯಕ್ಷರವರು ಭಾಷಾಂತರಿಸಿದರು.)

ಶ್ರೀ ಎಸ್. ಪಿ. ತಲವಾಲಕರ್.—ಟ್ರೈನಿಂಗ್ ಕೋರ್ಸನ್ನು ಬೆಳಗಾಂನಲ್ಲಿ ಒಂದು ರೀತಿಯಾಗಿ ಇನ್ನೊಂದು ಕಡೆ ಒಂದು ರೀತಿಯಾಗಿ ಮಾಡಲಾಗಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ಬೆಳಗಾಂ ಜಿಲ್ಲೆಯವರಿಗೆ ಒಂದು ರೀತಿ, ಹೊರಗಿನವರಿಗೆ ಒಂದು ರೀತಿಮಾಡಿಲ್ಲ. ಎಲ್ಲರಿಗೂ ಒಂದೇ ನಮನಾದ ಕೋರ್ಸು ಇರಬೇಕೆಂದಿದೆ.

ಶ್ರೀ ಎಸ್. ಪಿ. ತಲವಾಲ್‌ಕರ್.—ನನ್ನ ಪ್ರಶ್ನೆ ಹಾಗಲ್ಲ. ಬೆಳಗಾಂ ಊರಿನಿಂದ ಬರುವ ಹುಡುಗಿಯರಿಗೆಸ್ಟೈಪೆಂಡು ಕೊಡುವುದೇ ಒಂದು ರೀತಿ, ಮತ್ತು ಉಳಿದವರಿಗೇ ಒಂದು ರೀತಿಯಾಗಿದೆಯೇ ?

ಶ್ರೀ ಕೆ. ಕೆ. ಹೆಗ್ಗಡೆ.—ನರ್ಸಗಳಿಗೆ 30 ರೂಪಾಯಿ ಮತ್ತು, ರೇಷನ್ನು ಅಲೋಯನ್ಸ್ 10 ರೂಪಾಯಿಗಳನ್ನು ಕೊಡಲಾಗುತ್ತಿದೆ. ಮಿಡ್‌ವೈಫ್‌ಗಳಿಗೆ 20 ರೂಪಾಯಿ ಸ್ಟೈಪೆಂಡು ಮತ್ತು ಐದು ರೂಪಾಯಿ ಅಲೋಯನ್ಸು ಹೀಗೆ ಯೂನಿಫಾರಂ ಅಲೋಯನುನ್ಸುಗಳನ್ನು ಕೊಡುತ್ತಿದೆ.

ಶ್ರೀ ಎಸ್. ಪಿ. ತಲವಾಲ್‌ಕರ್.—ಕೆಲವರಿಗೆ ಇನ್ನೂ ಸ್ಟೈಪೆಂಡ್ ಸಿಕ್ಕಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಕೆ. ಹೆಗ್ಗಡೆ.—ಸ್ಪೈಪೆಂಡ್ ಯಾರಿಗೆ ಸಿಕ್ಕಿಲ್ಲ ವೆನ್ನುವುದನ್ನು ನನಕಾರಕ್ಕೆ ತಿಳಿಸಿದರೆ ನೂಕ್ ಗಮನ ಕೊಡಬಹುದು.

Sri G. DUGGAPPA.—Is it a fact that one male nurse in the Belgaum Civil Hospital has been transferred to Chikmagalur District Hospital because he was suffering from asthma?

Mr. SPEAKER.—That is outside the scope of the question.

———

Representation for writing off of takavi loan in Bellary District.

*Q.—233. Sri B. E. RAMAIAH (Siruguppa).—

Will the Government be pleased to state:—

(*a*) whether they have since received any representation and memoranda regarding the writing off of the takavi loans in Bellary District which are outstanding payment since past 20—30 years by virtue of the fact that the district is very much frequented by famine conditions practically every year and the repaying capacity of the ryots is very poor in view of the extreme proverty conditions of the ryots;

(*b*) the action taken by them in this behalf?

*A.—Sri KADIDAL MANJAPPA (Minister for Revenue).—

(*a*) Yes, from the Hon'ble Member himself.

(*b*) The proposal is under examination.

9 A.M.

ಶ್ರೀ ಬಿ. ಇ. ರಾಮಯ್ಯ.—ಹಳೆಯ ತಕಾವಿ ಸಾಲ 20—30 ವರ್ಷಗಳಿಂದಲೂ ಹಾಗೆಯೆ ಇರುವುದರಿಂದ ಹೊಸದಾಗಿ ಸಾಲಗಳನ್ನು ಕೊಡಬೇಕಾದರೆ ಬಹಳ ಕಷ್ಟವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

†ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಹೇಳುವ ಸಲಹೆಗಳನ್ನು ಒಪ್ಪಿಕೊಂಡರೆ ಹೊಸ ಸಾಲ ಗಳನ್ನು ಕೊಟ್ಟರೂ ಬರುವುದು ಕಷ್ಟವಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಬಳ್ಳಾರಿ ಜಿಲ್ಲೆಯ ಆಯಕಟ್ಟಿನಲ್ಲಿ ರೈತರಿಗೆ ಇರುವ ಜಮೀನು ಒಂದು ಸಾವಿರ ರೂಪಾಯಿ ಬಾಳಿದರೂ, ಅವನಿಗೆ 50 ರೂಪಾಯಿಗಳ ಹಿಂದಿನ ತಕಾವಿ ಸಾಲವಿದ್ದರೆ, ಹೊಸ ದಾಗಿ ಸಾಲ ಕೊಡುವುದಕ್ಕೆ ಶಕ್ಯವಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—Penal interest ಬಗ್ಗೆ ಏನು ಮಾಡಬೇಕೆಂಬುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕಾಗುತ್ತದೆ. ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

Dr. R. NAGAN GOWDA.—Since these loans were given about 30 to 40 years back at a time when there were frequent famines in these two taluks and because of the fact it has not been possible for them to repay them, is it not better that some of these loans which are old are written off?

Sri KADIDAL MANJAPPA.—There are the same kind of arrears in other regions of the State and there are similar conditions in those regions also. This is a question of taking a uniform decision. Whatever concession we extend to one region should be extended to other regions also.

———

Constitution of a Committee for Pre-primary Education.

*Q.—254. Sri J. B. MALLARADHYA (Nanjangud).—

Will the Government be pleased to state:—

(*a*) whether they have constituted a committee for pre-primary education and if so, when;

(*b*) the progress made by that committee;

(*c*) whether the committee has submitted its report;

(*d*) whether a copy of the report will be placed on the Table of the House;

(*e*) the expenditure incurred by the committee so far?

*A.—Sri ANNA RAO GANAMUKHI (Minister for Education).—

(*a*) Yes, on the 30th December 1957.

(*b*) The committee has not yet started functioning.

(*c*), (*d*) and (*e*). Do not arise in view of reply to Clause (*b*) above.

ಶ್ರೀ ಜೆ. ಬಿ. ಮಲ್ಲಾರಾಧ್ಯ.—1957ನೆಯ ಇಸವಿ ಯಲ್ಲಿ ಕಮಿಟಿ ಮಾಡಿ ಇಲ್ಲಿಯವರೆಗೂ ಪ್ರೋಗ್ರೆಸ್ ಇಲ್ಲವೆಂದರೆ ಏನು, ಸ್ವಾಮಿ?

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ಕಮಿಟಿಯಲ್ಲಿ ಇಲ್ಲವೇ?